49

ಸಮಗ್ರಶಿಕ್ಷಣಕರ್ನಾಟಕ
ರಾಜ್ಯಯೋಜನಾನಿರ್ದೇಶಕರಕಛೇರಿ, ಹೊಸಸಾರ್ವಜನಿಕಕಟ್ಟಡ, ನೃಪತುಂಗರಸ್ತೆ, ಬೆಂಗಳೂರು,560 001.
ದೂರವಾಣಿ:080–22483040, ಫ್ಯಾಕ್ಸ್:080–22104179, 22104187

ಸಂಖ್ಯೆಸಶಿಕ/ ಆ.ಶಾ01/2022–23 ದಿನಾಂಕ:24.06.2022

27

# ಸುತ್ತೋಲೆ

ವಿಷಯ: 2022–23 ನೇ ಶೈಕ್ಷಣಿಕ ವರ್ಷದಲ್ಲಿ 'ವಿದ್ಯಾ ಪ್ರವೇಶ– ಕಲಿಕಾ ಚೇತರಿಕೆ' ಉಪಕ್ರಮವನ್ನು ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು

ಉಲ್ಲೇಖ:
1. ದಿನಾಂಕ:13–6–2022ರಂದು ಜರುಗಿದ 'ಕಲಿಕಾ ಚೇತರಿಕೆ' ಉಪಕ್ರಮದ ಎರಡನೇ ಕೋರ್ ಸಮಿತಿ ಸಭಾ ನಡಾವಳಿ (ಕ್ರಮ ಸಂಖ್ಯೆ:26).
2. ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ವಿದ್ಯಾಪ್ರವೇಶ ಮತ್ತು ಕಲಿಕಾ ಚೇತರಿಕೆ ಕಾರ್ಯಕ್ರಮ ಅನುಷ್ಠಾನಾತ್ಮಕ ಮಾರ್ಗಸೂಚಿ ದಿನಾಂಕ:04.05.2022.
3. ನಿರ್ದೇಶಕರು, ಡಿಎಸ್ಇಆರ್‌ಟಿ ವತಿಯಿಂದ ಹೊರಡಿಸಿದ ಮಳೆಬಿಲ್ಲು ಕಾರ್ಯಕ್ರಮದ ಅನುಷ್ಠಾನ ಸುತ್ತೋಲೆ ದಿನಾಂಕ:13.05.2022.
4. ನಿರ್ದೇಶಕರು, ಡಿಎಸ್ಇಆರ್‌ಟಿ ವತಿಯಿಂದ ಹೊರಡಿಸಿದ ಪೂರ್ವ ಸಿದ್ಧತಾ ಅವಲೋಕನ ಚಟುವಟಿಕೆಗಳ ಜ್ಞಾಪನ ದಿನಾಂಕ:19.05.2022.

BRD

A6+9

27/6/22

*****

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಭೌತಿಕವಾಗಿ ತರಗತಿಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವುದನ್ನು ಗಮನಿಸಬಹುದು. ಬೋಧನಾ ಕಲಿಕಾ ಪ್ರಕ್ರಿಯೆಗಳ ಹಿನ್ನಡೆಯಿಂದಾಗಿ ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸುವ ಹಿನ್ನೆಲೆಯಿಂದ ತರಗತಿ 01 ರಿಂದ 09ನೇ ತರಗತಿವರೆಗಿನ ವಿದ್ಯಾರ್ಥಿಗಳ ಕಲಿಕೆಗೆ ಚೇತರಿಕೆಯನ್ನು ನೀಡುವ ಸಲುವಾಗಿ 2022–23ನೇ ಶೈಕ್ಷಣಿಕ ಅವಧಿಯಲ್ಲಿ 'ವಿದ್ಯಾ ಪ್ರವೇಶ' – 'ಕಲಿಕಾ ಚೇತರಿಕೆ' ಎಂಬ ಉಪಕ್ರಮವನ್ನು ಅಳವಡಿಸಲಾಗುತ್ತಿದೆ.

'ವಿದ್ಯಾ ಪ್ರವೇಶ – ಕಲಿಕಾ ಚೇತರಿಕೆ' ಉಪಕ್ರಮಕ್ಕೆ ಸಂಬಂಧಿಸಿದ ಅನುಷ್ಠಾನಾತ್ಮಕ ಅಂಶಗಳು:

- ತರಗತಿ 01 ರಿಂದ 03ನೇ ತರಗತಿವರೆಗೆ ಮೊದಲ ಮೂರು ತಿಂಗಳಿಗೆ ವಿದ್ಯಾ ಪ್ರವೇಶ ಅನುಷ್ಠಾನಗೊಂಡಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಶಿಕ್ಷಕರ ಕೈಪಿಡಿ ಹಾಗೂ ಮಕ್ಕಳ ಕಲಿಕಾ ಹಾಳೆಗಳ ಮಾಹಿತಿಯನ್ನು ಈಗಾಗಲೇ ಅಪ್ಲೋಡ್ ಮಾಡಲಾಗಿರುತ್ತದೆ.
- ಉಲ್ಲೇಖ(2)ರನ್ವಯ ದಿನಾಂಕ:04.05.2022ರಂದು ವಿದ್ಯಾಪ್ರವೇಶ ಮತ್ತು ಕಲಿಕಾ ಚೇತರಿಕೆ ಕಾರ್ಯಕ್ರಮದ ಅನುಷ್ಠಾನಾತ್ಮಕ ಮಾರ್ಗಸೂಚಿಯನ್ನು ಸಿದ್ಧಪಡಿಸಿ ಜಿಲ್ಲಾ ಹಂತದ ಎಲ್ಲಾ ಅಧಿಕಾರಿಗಳಿಗೆ ಕಳುಹಿಸಿದೆ.
- ಉಲ್ಲೇಖ(3)ಮತ್ತು (4)ರನ್ವಯ ತರಗತಿ 04 ರಿಂದ 09ನೇ ತರಗತಿವರೆಗೆ 'ಮಳೆಬಿಲ್ಲು' ಕಾರ್ಯಕ್ರಮವನ್ನು ಹಾಗೂ ಪೂರ್ವ ಸಿದ್ಧತಾ ಅವಲೋಕನಾ ಚಟುವಟಿಕೆಗಳ ಮಾರ್ಗಸೂಚಿಯನ್ನು ಡಿ.ಎಸ್.ಇ.ಆರ್.ಟಿ. ವತಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ.
- ಪ್ರಸ್ತುತ ತರಗತಿ 1 ರಿಂದ 3ನೇ ತರಗತಿಗಳಿಗೆ ವಿದ್ಯಾಪ್ರವೇಶ ಜಾರಿಯಲ್ಲಿರುತ್ತದೆ, ತರಗತಿ 4 ರಿಂದ 9ನೇ ತರಗತಿಯ ಪೂರ್ವ ಸಿದ್ಧತ ಅವಲೋಕನಾ ಚಟುವಟಿಕೆಗಳು ಅಂತಿಮ ಹಂತದಲ್ಲಿರುವುದನ್ನು ಗಮನಿಸಲಾಗಿದೆ.

97
27/6/2

(18)

ಈ ಮೇಲಿನ ಎಲ್ಲಾ ಅಂಶಗಳ ಮಾಹಿತಿಯನ್ನು ಶಾಲೆಗಳಿಗೆ ತಿಳಿಯಪಡಿಸಲು ಈಗಾಗಲೇ ಇಲಾಖೆ ವತಿಯಿಂದ ಅಗತ್ಯ ಕ್ರಮವಹಿಸಲಾಗಿದೆ. ಕಲಿಕಾ ಚೇತರಿಕೆ ಸಾಹಿತ್ಯದ ಮುದ್ರಣ ಮತ್ತು ಸರಬರಾಜು ಚಟುವಟಿಕೆಗಳ ಪ್ರಗತಿ ಅಂತಿಮ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ಕಲಿಕಾ ಚೇತರಿಕೆ ಕೋರ್ ಸಮಿತಿಯ ಸದಸ್ಯರ ತೀರ್ಮಾನದಂತೆ ಹಾಗೂ ಉಲ್ಲೇಖ(1)ರಂತೆ ಕಲಿಕಾ ಚೇತರಿಕೆ ಮುದ್ರಿತ ಸಾಹಿತ್ಯ ಶಾಲೆಗಳಿಗೆ ತಲುಪುವವರೆಗೆ ಮಾತ್ರ ಮಕ್ಕಳ ಕಲಿಕಾ ಸಮಯ ಮತ್ತು ಅವಕಾಶದ ಸಮಯವನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಅಧ್ಯಯನ/ಕಲಿಕಾಂಶ/ಕಲಿಕೆಯ ಫಲಗಳಿಗೆ ಪೂರಕವಾಗಿ ಕಲಿಕೆ/ಅಭ್ಯಾಸದ ಚಟುವಟಿಕೆಗಳಿಗೆ ಅವಶ್ಯವಿರುವ ಅಂದರೆ, ಈಗಾಗಲೇ ಕಲಿಕಾ ಚೇತರಿಕೆ ತರಬೇತಿ ಮೂಲಕ ಎಲ್ಲಾ ಶಿಕ್ಷಕರಿಗೆ ಅರ್ಥೈಸಲಾಗಿರುವಂತೆ ಆಯಾ ಕಾಲಾವಧಿಗೆ ತಕ್ಕಂತೆ ಆಯಾ ಕಲಿಕೆಯ ಹಾಳೆಗಳನ್ನು ಮಾತ್ರ ಪರಿಗಣಿಸಿ ಕೆಳಕಂಡಂತೆ ಕ್ರಮ ಕೈಗೊಳ್ಳುವುದು:

- ದಾನಿಗಳು / ಸಿಎಸ್‌ಆರ್ ಅನುದಾನ ಲಭ್ಯತೆ ಮೇರೆಗೆ ಮಗುವಾರು ಅಥವಾ ಒಂದು ತರಗತಿಗೆ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿಷಯವಾರು ಕಲಿಕಾ ಹಾಳೆಗಳನ್ನು ಜೆರಾಕ್ಸ್ ಮಾಡಿಸಿ ಮಕ್ಕಳಿಂದ ಕಲಿಕಾ ಅಭ್ಯಾಸ ಚಟುವಟಿಕೆಗಳನ್ನು ಸದರಿ ಜೆರಾಕ್ಸ್ ಮಾಡಿಸಿದ ಅಭ್ಯಾಸ ಹಾಳೆಗಳಲ್ಲಿ ಅಥವಾ ನೋಟ್ ಪುಸ್ತಕಗಳಲ್ಲಿ ಮಾಡಿಸುವುದು.

ಅಥವಾ

- ಶಾಲೆಯಲ್ಲಿ ಲಭ್ಯವಿರುವ ಶಾಲಾನುದಾನ / ಎಸ್.ಡಿ.ಎಮ್.ಸಿ ಅನುದಾನ ಇತ್ಯಾದಿ ಯಾವುದೇ ಸರ್ಕಾರದ ಅನುದಾನವನ್ನು ಬಳಸುವುದಾದಲ್ಲಿ ಒಂದು ತರಗತಿ/ವಿಭಾಗಕ್ಕೆ ಒಂದು ವಿಷಯಕ್ಕೆ ಒಂದು ಪ್ರತಿಯಂತೆ ಮಾತ್ರ ಜೆರಾಕ್ಸ್ ಪ್ರತಿ ಸಿದ್ಧಪಡಿಸಿ, ಸದರಿ ಪ್ರತಿ ಆಧಾರದಿಂದ ಎಲ್ಲಾ ಮಕ್ಕಳಿಂದ ಅವರವರ ನೋಟ್ ಪುಸ್ತಕದಲ್ಲಿ ಕಲಿಕಾ ಚಟುವಟಿಕೆಗಳನ್ನು ಮಾಡಿಸಲು ತರಗತಿ ಶಿಕ್ಷಕರು ಕ್ರಮವಹಿಸುವುದು.

ಮುಂದುವರೆದು, ಎಲ್ಲಾ ಮೇಲುಸ್ತುವಾರಿ ಅಧಿಕಾರಿಗಳು ಸೂಕ್ತ ಮಾರ್ಗದರ್ಶನದೊಂದಿಗೆ ಮೇಲೆ ತಿಳಿಸಿದಂತೆ ಮಕ್ಕಳಿಂದ ಕಲಿಕೆಯ ಚಟುವಟಿಕೆಗಳನ್ನು ನಿರ್ವಹಿಸಲು ನೆರವಾಗುವಂತೆ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ಸಹ ಶಿಕ್ಷಕರು ಕ್ರಮವಹಿಸುವಂತೆ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ)ಇವರಿಗೆ ಸೂಚಿಸಿದೆ.

27.06.2022

ರಾಜ್ಯ ಯೋಜನ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು

ಇವರಿಗೆ ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಇವರಿಗೆ
2. ರಾಜ್ಯದ ಎಲ್ಲಾ ಬ್ಲಾಕ್‌ಗಳ ಕ್ಷೇತ್ರಶಿಕ್ಷಣಾಧಿಕಾರಿಗಳು / ಕ್ಷೇತ್ರಸಮನ್ವಯಾಧಿಕಾರಿಗಳು ಇವರಿಗೆ(ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು(ಆಡಳಿತ)ರವರ ಮೂಲಕ).
3. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು ಇವರಿಗೆ(ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ).

ಗೌರವಪೂರಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

1. ಮಾನ್ಯ ಸರ್ಕಾರದ ಪ್ರಧಾನಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ,ಕರ್ನಾಟಕ ಸರ್ಕಾರ ಇವರ ಆದ್ಯ ಗಮನ ಸೆಳೆಯಲು ಆಪ್ತಶಾಖೆಗೆ
2. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಆದ್ಯ ಗಮನ ಸೆಳೆಯಲು ಆಪ್ತಶಾಖೆಗೆ

Scanned with Oken Scanner